<u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 535 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 20.08.2026 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಇತ್ತೀಚೆಗೆ ದಿನಗಳಲ್ಲಿ ವಿಜಯಪುರ ಜಿಲ್ಲೆ ಮತ್ತು ಅದರ ಸುತ್ತಮುತ್ತಲಿನ ಭಾಗಗಳಲ್ಲಿ ಸರಣಿ ಹತ್ಯೆ ಪ್ರಕರಣಗಳು ಮತ್ತು ಕೊಲೆ ಕೃತ್ಯಗಳು ಗಣನೀಯವಾಗಿ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ, ಕಳೆದ ಎರಡು ವರ್ಷಗಳಲ್ಲಿ ಈ ಭಾಗದಲ್ಲಿ ನಡೆದಿರುವ ಒಟ್ಟು ಕೊಲೆ ಪ್ರಕರಣಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು) | ವಿಜಯಪುರ ಜಿಲ್ಲೆ ಮತ್ತು ಅದರ ಸುತ್ತಮುತ್ತಲಿನ ಭಾಗಗಳಲ್ಲಿ ಸರಣಿ ಹತ್ಯೆ ಪ್ರಕರಣಗಳು ಮತ್ತು ಕೊಲೆ ಕೃತ್ಯಗಳು ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ವಿಜಯಪುರ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ನಡೆದಿರುವ ಕೊಲೆ ಪ್ರಕರಣಗಳ ವಿವರವನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ. |
| ಆ) | ಈ ಹತ್ಯೆ ಪ್ರಕರಣಗಳಲ್ಲಿ ಭಾಗಿಯಾಗಿರುವ ಆರೋಪಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕಾನೂನು ಕ್ರಮಗಳೇನು; ಎಷ್ಟು ಪ್ರಕರಣಗಳಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ ಮತ್ತು ಎಷ್ಟು ಪ್ರಕರಣಗಳು ಇನ್ನು ತನಿಖಾ ಹಂತದಲ್ಲಿವೆ; ಯಾವಾಗ ತನಿಖೆ ಪೂರ್ಣಗೊಳಿಸಿ ಅಪರಾಧಿಗಳನ್ನು ಶಿಕ್ಷೆಗೆ ಒಳಪಡಿಸಲಾಗುವುದು; | ಕಳೆದ ಎರಡು ವರ್ಷಗಳಲ್ಲಿ ವಿಜಯಪುರ ಜಿಲ್ಲೆ ಮತ್ತು ಅದರ ಸುತ್ತಮುತ್ತಲಿನ ಭಾಗಗಳಲ್ಲಿ ವರದಿಯಾಗಿರುವ ಹತ್ಯೆಪ್ರಕರಣಗಳಲ್ಲಿ ಭಾಗಿಯಾದ ಆರೋಪಿಗಳನ್ನು ಪತ್ತೆ ಹಚ್ಚಿ ಬಂಧಿಸಿ, ನ್ಯಾಯಾಲಯದ ಮುಂದೆ ಹಾಜರು ಪಡಿಸಿ, ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.<br><br>ಮುಂದುವರೆದು, ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ, ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸಿಕೊಂಡು, ತನಿಖೆಯನ್ನು ಪೂರ್ಣಗೊಳಿಸಿ, ಆರೋಪಿಗಳ ವಿರುದ್ಧ ದೋಷಾರೋಪಣಾ ಪಟ್ಟಿ ಸಿದ್ಧಪಡಿಸಿ ನ್ಯಾಯಾಲಯಕ್ಕೆ ಸಲ್ಲಿಸುವುದರ ಮೂಲಕ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ.<br><br>• 172 ಹತ್ಯೆ ಪ್ರಕರಣಗಳು ದಾಖಲಾಗಿದ್ದು, ಅವುಗಳಲ್ಲಿ 164 ಪ್ರಕರಣಗಳಲ್ಲಿ 476 ಆರೋಪಿಗಳನ್ನು ಬಂಧಿಸಲಾಗಿದೆ.<br><br>• 139 ಪ್ರಕರಣಗಳಲ್ಲಿ ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ.<br><br>• 18 ಪ್ರಕರಣಗಳು ಇನ್ನು ತನಿಖೆಯಲ್ಲಿರುತ್ತದೆ. |

| | | |
|---|---|---|
| | | • 1 1 ಪ್ರಕರಣಗಳಲ್ಲಿ ಆರೋಪಿಗಳಿಗೆ ಶಿಕ್ಷೆ ವಿಧಿಸಲಾಗಿದೆ. |
| ಇ) | ವಿಶೇಷವಾಗಿ ಚಡಚಣ ಪಟ್ಟಣದ ಒಂದೇ ಕುಟುಂಬದ 5 ಜನ ಹಾಗೂ ಇನ್ನೊರ್ವರನ್ನು ಸೇರಿ ಒಟ್ಟು 6 ಜನರನ್ನು ಚಡಚಣ ತಾಲ್ಲೂಕಿನ ಗೋವಿಂದಪೂರ ಗ್ರಾಮದಲ್ಲಿ ಹಾಡು ಹಗಲೇ ಬರ್ಬರವಾಗಿ ಹತ್ಯೆ ಮಾಡಲಾಗಿದ್ದು ಇದಕ್ಕೆ ಸಂಬಂಧಿಸಿದಂತೆ ಸರ್ಕಾರವು ಕೈಗೊಂಡ ಕಾನೂನು ಕ್ರಮಗಳೇನು; ಅಪರಾಧಿಗಳಿಗೆ ಯಾವ ಕಾಲಮಿತಿಯೊಳಗೆ ಶಿಕ್ಷೆಗೆ ಒಳಪಡಿಸಲಾಗುವುದು; ಈ ಕುರಿತು ಸಂಪೂರ್ಣ ಮಾಹಿತಿ ಮತ್ತು ವರದಿ ನೀಡುವುದು; | ಚಡಚಣ ಪಟ್ಟಣದ ಒಂದೇ ಕುಟುಂಬದ 5 ಜನ ಹಾಗೂ ಇನ್ನೊರ್ವರನ್ನು ಸೇರಿ ಒಟ್ಟು 6 ಜನರನ್ನು ಚಡಚಣ ತಾಲ್ಲೂಕಿನ ಗೋವಿಂದಪೂರ ಗ್ರಾಮದಲ್ಲಿ ಹಾಡು ಹಗಲೇ ಬರ್ಬರವಾಗಿ ಹತ್ಯೆ ಮಾಡಲಾದ ಪ್ರಕರಣದಲ್ಲಿ ಚಡಚಣ ಪಟ್ಟಣ ಪೊಲೀಸ್ ಠಾಣೆ ಮೊ.ಸಂ. 73/2026 ಕಲಂ: 189(2), 191(2), 191(3), 103(1), 109, 329(3), 361(2), 352, 324(3), 49 ಸಹ ಕಲಂ 191 ಬಿ.ಎನ್.ಎಸ್ - 2023 ರೀತ್ಯಾ ಪ್ರಕರಣ ದಾಖಲಿಸಲಾಗಿದೆ.<br><br>ಈ ಪ್ರಕರಣದಲ್ಲಿ ಒಟ್ಟು 51 ಜನ ಆರೋಪಿಗಳನ್ನು ಬಂಧಿಸಲಾಗಿರುತ್ತದೆ.<br><br>ಸದರಿ ಪ್ರಕರಣದ ಸಂಪೂರ್ಣ ಮಾಹಿತಿಯನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ. |
| ಈ) | ಇಂತಹ ಜಘನ್ಯ ಕೃತ್ಯಗಳಲ್ಲಿ ಭಾಗಿಯಾದ ದುಷ್ಕರ್ಮಿಗಳಿಗೆ ತುರ್ತಾಗಿ ಕಠಿಣ ಶಿಕ್ಷೆ ವಿಧಿಸಲು ಹಾಗೂ ನ್ಯಾಯಾಲಯಗಳಲ್ಲಿ ಶೀಘ್ರ ವಿಚಾರಣೆ ನಡೆಸಲು (Fast –Track Trial) ಸರ್ಕಾರವು ವಿಶೇಷ ಅಭಿಯೋಜಕರನ್ನು (Special Public Prosecutors) ನೇಮಿಸಿದೆಯೇ; ಇಲ್ಲದಿದ್ದಲ್ಲಿ ಈ ಕುರಿತು ಸರ್ಕಾರದ ನಿಲುವೇನು; | ಚಡಚಣ ಪೊಲೀಸ್ ಠಾಣೆಯಲ್ಲಿ ದಾಖಲಿಸಿದ ಮೊ.ಸಂ. 73/2026 ಕಲಂ: 189(2), 191(2), 191(3), 103(1), 109, 329(3), 361(2), 352, 324(3), 49 R/w: 190 ಬಿ.ಎನ್.ಎಸ್ – 2023ರ ಪ್ರಕರಣದಲ್ಲಿ ಜಘನ್ಯ ಕೃತ್ಯಗಳಲ್ಲಿ ಭಾಗಿಯಾದ ದುಷ್ಕರ್ಮಿಗಳಿಗೆ ತುರ್ತಾಗಿ ಕಠಿಣ ಶಿಕ್ಷೆ ವಿಧಿಸುವ ಸಲುವಾಗಿ ಮತ್ತು ಶೀಘ್ರ ವಿಚಾರಣೆ ನಡೆಸಲು ಸರ್ಕಾರದ ಪರವಾಗಿ ವಾದ ಮಂಡಿಸಲು ಧಾರವಾಡ ಜಿಲ್ಲಾ ಸತ್ರ ನ್ಯಾಯಾಲಯದ ವಿಶೇಷ ಸರ್ಕಾರಿ ಅಭಿಯೋಜಕರನ್ನು ನೇಮಿಸುವ ಕುರಿತು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |
| ಉ) | ಹತ್ಯೆಗೀಡಾದ ಸಂತ್ರಸ್ತರ ಕುಟುಂಬಗಳಿಗೆ ತಕ್ಷಣದ ಆರ್ಥಿಕ ಪರಿಹಾರ ಮತ್ತು ಸಾಮಾಜಿಕ ಭದ್ರತೆಯನ್ನು ಒದಗಿಸುವ ಮೂಲಕ ನ್ಯಾಯ ಒದಗಿಸಲು ಸರ್ಕಾರ ಕೈಗೊಂಡಿರುವ ಅಥವಾ ಕೈಗೊಳ್ಳಲಿರುವ ತುರ್ತು ಕ್ರಮಗಳೇನು? | ಹತ್ಯೆಗೀಡಾದ ಸಂತ್ರಸ್ತರ ಕುಟುಂಬಗಳಿಗೆ ಸಂತ್ರಸ್ತರ ಪರಿಹಾರ ಯೋಜನೆಯಡಿ ಆರ್ಥಿಕ ಪರಿಹಾರ ಒದಗಿಸುವುದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವ್ಯಾಪ್ತಿಗೆ ಒಳಪಟ್ಟಿರುತ್ತದೆ.<br><br>ಸಂತ್ರಸ್ತರ ಕುಟುಂಬಗಳಿಗೆ ಭದ್ರತೆಯನ್ನು ಒದಗಿಸುವ ಸಲುವಾಗಿ ಹಗಲು ಮತ್ತು ರಾತ್ರಿ ಪಾಳಿಯಲ್ಲಿ ಫಿಕ್ಸ್ ಪಾಯಿಂಟ್ ಕರ್ತವ್ಯಕ್ಕೆ ಪೊಲೀಸ್ ಅಧಿಕಾರಿ/ ಸಿಬ್ಬಂದಿಗಳನ್ನು ನಿಯೋಜಿಸಲಾಗಿರುತ್ತದೆ. |

ಸಂಖ್ಯೆ: ಹೊಇ 72 ಪಿಸಿಎಲ್ 2026

(ಪ್ರಿಯಾಂಕ್ ಖರ್ಗೆ)
ಗೃಹ ಸಚಿವರು

# ಅನುಬಂಧ -1

| ಕ್ರ.ಸಂ | ಉಪ ವಿಭಾಗ ವಿವರ | ಠಾಣೆಗಳ ವಿವರ | 2024 | 2025 | 2026 |
|---|---|---|---|---|---|
| 1) | ಬ.ಬಾಗೇವಾಡಿ ಉಪವಿಭಾಗ | ಬ.ಬಾಗೇವಾಡಿ | 03 | 01 | 03 |
| | | ಕೊಲ್ಹಾರ | 03 | 01 | 00 |
| | | ಮುದ್ದೇಬಿಹಾಳ | 06 | 03 | 03 |
| | | ನಿಡಗುಂದಿ | 03 | 04 | 00 |
| | | ತಾಳಿಕೋಟೆ | 02 | 03 | 02 |
| 2) | ವಿಜಯಪುರ ಗ್ರಾಮಾಂತರA | ವಿಜಯಪುರ ಗ್ರಾಮೀಣ | 03 | 10 | 05 |
| | | ತಿಕೋಟಾ | 02 | 02 | 03 |
| | | ಬಬಲೇಶ್ವರ | 08 | 02 | 01 |
| | | ಮನಗೂಳಿ | 00 | 03 | 00 |
| | | ದೇ.ಹಿಪ್ಪರಗಿ | 03 | 04 | 02 |
| 3) | ವಿಜಯಪುರ ಶಹರ | ವಿಜಯಪುರ ಶಹರ | 07 | 09 | 06 |
| 4) | ಇಂಡಿ ಉಪವಿಭಾಗ | ಸಿಂದಗಿ | 07 | 06 | 01 |
| | | ಆಲಮೇಲ | 05 | 06 | 03 |
| | | ಇಂಡಿ | 04 | 04 | 11 |
| | | ಚಡಚಣ | 06 | 08 | 04 |
| | | ಒಟ್ಟು | 62 | 66 | 44 |

## ಅನುಬಂಧ -2

ವಿಜಯಪುರ ಜಿಲ್ಲೆಯ ಚಡಚಣ ಪಟ್ಟಣದ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಗೋವಿಂದಪೂರ ಗ್ರಾಮದಲ್ಲಿ ಖ್ಯಾಮುನಿಂಗ ತಂದೆ ಸಂಗಪ್ಪಾ ತೇಲಿ @ ಗಾಣಿಗೇರ್ ಸಾ// ನಿವರಗಿ ಹಾಲಿ ವಸತಿ ಗೋವಿಂದಪೂರದ ಇವರ ಮನೆತನದ ಹುಡುಗಿಯನ್ನು ಅದೇ ಊರಿನ ಕಲ್ಲನಗೌಡ ತಂದೆ ಈಶ್ವರಗೌಡ ಪಾಟೀಲ ಇವರ ಮಗ ಓಡಿಸಿಕೊಂಡು ಹೋಗಿ ಮದುವೆ ಮಾಡಿಕೊಂಡಿರುತ್ತಾನೆ, ಆದುದರಿಂದ ವೈಷಮ್ಯದಿಂದಾಗಿ ತೇಲಿ ರವರ ಮನೆತನ ಮತ್ತು ಪಾಟೀಲ್ ರವರ ಮನೆತನದ ನಡುವೆ ಸಂಘರ್ಷ ಉಂಟಾಗಿ ತೇಲಿ ರವರು ಕುಟುಂಬದ ಸುಮಾರು 10 ವರ್ಷಗಳಿಂದ ಉಳುಮೆ ಮಾಡದೇ ಹಾಳು ಬಿದ್ದಿರುವ ಜಮೀನನ್ನು 5-6 ತಿಂಗಳ ಹಿಂದೆ ಚಡಚಣ ಪಟ್ಟಣದ ನಿರಾಳೆ ಮನೆತನದವರು ಸ್ವಚ್ಛಗೊಳಿಸುವ ಸಲುವಾಗಿ ಜಮೀನಿಗೆ ತೆರಳಿದಾಗ ಸದರಿ ಕುಟುಂಬದ ಸದಸ್ಯರು 5 ಜನ ಹಾಗೂ ಇನ್ನೊರ್ವ ಸೇರಿದಂತೆ ಒಟ್ಟು 06 ಜನರನ್ನು ಹಾಡು ಹಗಲೆ ಹತ್ಯೆ ಮಾಡಿರುತ್ತಾರೆ.

ಆದುದರಿಂದ ಕುಟುಂಬದ ಸದಸ್ಯರಾದ ಚೈತನ್ಯ ಕುಮಾರ ತಂದೆ ದುಂಡಪ್ಪಾ ನಿರಾಳೆ ವಯಸ್ಸು 33 ರವರು ದಿನಾಂಕ: 29.05.2026 ರಂದು ಚಡಚಣ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಫಿರ್ಯಾದಿಯನ್ನು ಸಲ್ಲಿಸಿದ್ದು ಅದರಂತೆ ಚಡಚಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ಸಂಖ್ಯೆ 73/2026 ಕಲಂ:189(2), 191(2), 191(3), 103(1), 109, 329(3), 351(2), 352, 324(3), 49 ಮತ್ತು ಸಹ ಕಲಂ 191 ಬಿಎನ್‌ಎಸ್ 2023 ರನ್ವಯ ಪ್ರಕರಣವನ್ನು ದಾಖಲಿಸಿದ್ದು ತದನಂತರ ಡಿವೈಎಸ್‌ಪಿ ಇಂಡಿ ಉಪ ವಿಭಾಗ ರವರ ನೇತೃತ್ವದಲ್ಲಿ ತನಿಖಾ ತಂಡವನ್ನು ರಚಿಸಿ ಪ್ರಮುಖ ಆರೋಪಿ ಕಲ್ಲನಗೌಡ ತಂದೆ ಈಶ್ವರಗೌಡ ಪಾಟೀಲ ರವರು ಸೇರಿದಂತೆ ಒಟ್ಟು 51 ಜನ ಆರೋಪಿಗಳನ್ನು ದಸ್ತಗಿರಿ ಮಾಡಿ ವಿವಿಧ ಬಂಧೀಖಾನೆಗಳಿಗೆ ಕಳುಹಿಸಿಕೊಡಲಾಗಿರುತ್ತದೆ, ಉಳಿದಂತೆ ಪರಾರಿಯಾಗಿರುವ 5 ಜನ ಆರೋಪಿಗಳ ಪತ್ತೆಗೆ ಕ್ರಮ ಕೈಗೊಂಡಿದ್ದು, ಸದರಿ ಪ್ರಕರಣದಲ್ಲಿ ಆರೋಪಿಗಳಿಗೆ ಶಿಕ್ಷೆ ವಿಧಿಸುವಲ್ಲಿ ತನಿಖಾ ತಂಡವು ಈಗಾಗಲೇ ಎಫ್‌ಎಸ್‌ಎಲ್ ವರದಿಯನ್ನು ಸ್ವೀಕರಿಸಿ ದೋಷಾರೋಪಣಪಟ್ಟಿಯನ್ನು ಸಿದ್ಧಪಡಿಸಿಕೊಂಡಿದ್ದು ಜಿಲ್ಲಾಧಿಕಾರಿಗಳು ವಿಜಯಪುರ ರವರ ಅನುಮತಿ ನಂತರ ಧಾರವಾಡ ಜಿಲ್ಲೆಯ ಸತ್ರ ನ್ಯಾಯಾಲಯದ ವಿಶೇಷ ಅಭಿಯೋಜಕರನ್ನು ಸರ್ಕಾರದ ಪರವಾಗಿ ವಾದ ಮಾಡಲು ವಿಶೇಷ ಸರ್ಕಾರಿ ಅಭಿಯೋಜಕರನ್ನು ನೇಮಿಸುವ ಕುರಿತು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಹತ್ಯೆಗೀಡಾದ ಸಂತ್ರಸ್ತ ಕುಟುಂಬಕ್ಕೆ ಸೂಕ್ತ ರಕ್ಷಣೆಯನ್ನು ನೀಡಲು ಹಗಲು ಮತ್ತು ರಾತ್ರಿ ಪಾಳಿಯಲ್ಲಿ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ.

**ಇಂತಹ ಅಪರಾಧ ಪ್ರಕರಣಗಳನ್ನು ತಪ್ಪಿಸಲು ಜಿಲ್ಲಾ ಪೊಲೀಸ್ ಇಲಾಖೆಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.**

- ಬೀಟ್ ಸಿಬ್ಬಂದಿಗಳಿಗೆ ಬೀಟ್‌ಗಳಲ್ಲಿ ಇರುವ ಸಿವಿಲ್ ವ್ಯಾಜ್ಯಗಳ ಮಾಹಿತಿ ಸಂಗ್ರಹಿಸಿ ಉಭಯ ಪಾರ್ಟಿ ಜನರ ಮೇಲೆ ಪಿ.ಎ.ಆರ್ ಪ್ರಕರಣಗಳನ್ನು ದಾಖಲಿಸಿ ಬಾಂಡೋವರ್ ಮಾಡಿಸಲಾಗುತ್ತಿದೆ.
- ಅಪರಾಧ ಪ್ರಕರಣಗಳನ್ನು ತ್ವರಿತವಾಗಿ ವೈಜ್ಞಾನಿಕ ಮತ್ತು ತಾಂತ್ರಿಕ ಆಧಾರದ ಮೇಲೆ ತನಿಖೆಗೆ ಸೂಕ್ತ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಲು SOCO (Scene of Crime officer) ಅಧಿಕಾರಿಗಳನ್ನು ನಿಯೋಜಿಲಾಗಿದೆ.
- ಅಪರಾಧ ತಡೆಗಟ್ಟಲು ಮತ್ತು ಕಾನೂನು ಸುವ್ಯವಸ್ಥೆ ನಿಯಂತ್ರಿಸಲು ಚರಿತ್ರಹೀನ ಆಸಾಮಿ, ರೌಡಿ ಪಟ್ಟಿ ಆಸಾಮಿ, ರೂಢಿಗತ ಅಪರಾಧಿ, ಪೂರ್ವಸೂಚಿ ಆಸಾಮಿ, ಕಮ್ಯುನಲ್ ಗೂಂಡಗಳ ವಿರುದ್ಧ BNSS/ BNS ಅಡಿಯಲ್ಲಿ ಪ್ರಕರಣ ನೊಂದಾಯಿಸಿ ಸಮಾಜದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ಸಲುವಾಗಿ

ಸದರಿಯವರುಗಳಿಂದ ಜಾಮೀನು ಮುಚ್ಚಳಿಕೆಯನ್ನು ಪಡೆದು ನಿಗಾವಹಿಸಿ ನಿಯಂತ್ರಣದಲ್ಲಿ ಇಡಲಾಗಿದೆ.

- ಅಪರಾಧ ಪ್ರಕರಣಗಳಲ್ಲಿ ನಿಗದಿತ ಅವಧಿಯೊಳಗೆ ( 60/90 ದಿನಗಳು) ದೋಷಾರೋಪಣೆ ಪಟ್ಟಿಗಳನ್ನು ಸಲ್ಲಿಸುವ ಕುರಿತಂತೆ ರಾಜ್ಯದ Nodal officer ಆಗಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಅಪರಾಧ ಮತ್ತು ತಾಂತ್ರಿಕ ಸೇವೆ ರವರನ್ನು ನೇಮಕ ಮಾಡಲಾಗಿದೆ.
- ಎಮ್‌ಓಬಿ (Modus Operandi) ಆಸಾಮಿಗಳ ವಿರುದ್ಧ ದಾಖಲಾತಿಗಳನ್ನು ನಿರ್ವಹಣೆ ಮಾಡಿ ಅವರು ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗದಂತೆ ನಿಗಾವಹಿಸಲಾಗುತ್ತಿದೆ
- ಘೋರ ಪ್ರಕರಣಗಳನ್ನು ವೈಜ್ಞಾನಿಕವಾಗಿ ತನಿಖೆಯನ್ನು ಕೈಕೊಂಡು ಸಾಕ್ಷಿ ಪುರಾವೆಗಳನ್ನು ಸಂಗ್ರಹಿಸಿ ನಿಗದಿತ ಅವಧಿಯಲ್ಲಿ ತನಿಖೆಯನ್ನು ಮುಕ್ತಾಯಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಲಾಗುತ್ತಿದೆ.
- ಆಯಾ ಠಾಣೆಗಳಲ್ಲಿ ದಾಖಲಾಗುವ ಘೋರ ಪ್ರಕರಣಗಳಲ್ಲಿ ಟ್ರಯಲ್ ಮಾನಿಟರಿಂಗ್ ಮಾಡಲಾಗುತ್ತಿದೆ.
- ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಜಿಲ್ಲಾ ಪೊಲೀಸ್ ಇಲಾಖೆ ಅಲ್ಲದೆ ಇತರೆ ಇಲಾಖೆಗಳ ಸಹಯೋಗದೊಂದಿಗೆ ಹಳ್ಳಿಹಳ್ಳಿಗಳಲ್ಲಿ ಕಾನೂನಿನ ಅರಿವು ಮೂಡಿಸಲಾಗುತ್ತಿದೆ

- ಈಗಾಗಲೇ ರಾಜ್ಯ ಪೊಲೀಸ್ ಇಲಾಖೆಯಿಂದ ಸಮುದಾಯ ದತ್ತ ಪೊಲೀಸ್ ಕಾರ್ಯಕ್ರಮವಾದ "ಮನೆ ಮನೆಗೆ ಪೊಲೀಸ್" ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದೆ.